XVII. ಶ್ರೀ ಎಸ್. ನಂಜಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿ) ಮಾನ್ಯ ಅಧ್ಯಕ್ಷರೆ, 1956ರ ಕಂಪನಿಗಳ ಕಾಯ್ದೆಯ 619ರ ಕಲಮಿನ ಮೇರೆಗೆ;

1987–88ನೇ ಸಾಲಿನ ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತದ 15ನೇ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

XVIII. ಶ್ರೀ ಬಿ.ಎನ್. ಬಚ್ಚೇಗೌಡ (ಪಶು ಸಂಗೋಪನೆ ರಾಜ್ಯ ಮಂತ್ರಿ) ಮಾನ್ಯ ಅಧ್ಯಕ್ಷರೆ, **1956ರ ಕಂಪನಿಗಳ ಕಾಯ್ದೆಯ 619ಎ ಕಲಮಿನ ಮೇರೆಗೆ;**

ಕರ್ನಾಟಕ ಮಾಂಸ ಮತ್ತು ಕೋಳಿ ಮಾರಾಟ ನಿಗಮ ನಿಯಮಿತದ 19ನೇ ವಾರ್ಷಿಕ ವರದಿ ಮತ್ತು 31.3.1993ರ ಲೆಕ್ಕ ಪತ್ರಗಳನ್ನು ಮಂಡಿಸುತ್ತೇನೆ.

XIX. ಶ್ರೀ ಎಂ.ಸಿ. ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೆ, ವಸತಿ ರಾಜ್ಯ ಮಂತ್ರಿಗಳ ಪರವಾಗಿ

1962ರ ಕರ್ನಾಟಕ ಗೃಹ ಮಂಡಳಿ ಅಧಿನಿಯಮದ 55(3)ನೇ ಕಲಮಿನ ಮೇರೆಗೆ;

1987–88ನೇ ಸಾಲಿನ ಕರ್ನಾಟಕ ಗೃಹ ಮಂಡಳಿಯ ವಾರ್ಷಿಕ ಲೆಕ್ಕಪತ್ರ ತಪಾಸಣಾ ವರದಿಯನ್ನು ಮಂಡಿಸುತ್ತೇನೆ:

XX. ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) ಮಾನ್ಯ ಅಧ್ಯಕ್ಷರೆ, ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಮಂತ್ರಿಯವರ ಪರವಾಗಿ

1956ರ ಕಂಪನಿಗಳ ಕಾಯ್ದೆಯ 619ಎ ಕಲಮಿನ ಮೇರೆಗೆ;

1992–93ನೇ ಸಾಲಿನ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ನಿಯಮಿತದ 6ನೇ ವಾರ್ಷಿಕ ವರದಿ ಮತ್ತು ಲೆಕ್ಕ ಪತ್ರಗಳನ್ನು (ವಿಳಂಬಕ್ಕೆ ಕಾರಣಗಳೊಂದಿಗೆ) ಮಂಡಿಸುತ್ತೇನೆ.

ಕಾರ್ಯದರ್ಶಿಯವರ ವರದಿ

ಕಾರ್ಯದರ್ಶಿ:– ಮಾನ್ಯ ಅಧ್ಯಕ್ಷರೇ, 9ನೇ ವಿಧಾನಸಭೆಯ ಈ ಕೆಳಕಂಡ ಸಮಿತಿಗಳ ವರದಿಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

1. ಸಾರ್ವಜನಿಕ ಉದ್ದಿಮೆಗಳ ಸಮಿತಿಯ 62, 63, 64 ಹಾಗೂ 65ನೇ ವರದಿಗಳು.

2. 1994–95ನೇ ಸಾಲಿನ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮೇಲಿನ ವಿಷಯ ಸಮಿತಿಯ 2ನೇ ವರದಿ.

ಕೃಷ್ಣ ಮತ್ತು ಕಾವೇರಿ ಯೋಜನೆಗಳ ಬಗ್ಗೆ ಸರ್ಕಾರದ ನಿಲುವು

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಅಧ್ಯಕ್ಷರೇ, ನಾನು ತಮ್ಮ ಕೊಠಡಿಗೆ ಬಂದು ತಮ್ಮ ಅಪ್ಪಣೆಯನ್ನು ಪಡೆದು ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಬೇಕೆಂದು ಹೇಳಿದ್ದೇನೆ.

ಅಧ್ಯಕ್ಷರು: ತಾವುಗಳು ತಮ್ಮ ನಿಲುವಳಿ ಸೂಚನೆಯ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಹೊರಟಿದ್ದೀರಿ. ಶೂನ್ಯವೇಳೆಯಲ್ಲಿ ಅವರು ಎರಡು ವಿಷಯಗಳನ್ನು ಹೇಳಿದ್ದಾರೆ. ಅದು ಆದ ನಂತರ ತಮ್ಮ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಲು ಅವಕಾಶ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೇ, ಹೊಸ ಸರಕಾರವು ಅಧಿಕಾರಕ್ಕೆ ಬಂದಮೇಲೆ

ಕೃಷ್ಣ ಮತ್ತು ಕಾವೇರಿ ಯೋಜನೆಗಳ ಬಗ್ಗೆ ತಮ್ಮ ಸರಕಾರದ ನಿಲುವು ಏನು ಎನ್ನುವ ಬಗ್ಗೆ ಇಲ್ಲಿಯವರೆಗೂ ಅವರು ಸ್ಪಷ್ಟಪಡಿಸಿಲ್ಲ. ಈ ರಾಜ್ಯದ ಮುಖ್ಯಮಂತ್ರಿಯರಾದ ಮಾನ್ಯ ದೇವೇಗೌಡರವರು ಕೃಷ್ಣ ಕಾವೇರಿ ಯೋಜನೆಗಳ ಬಗ್ಗೆ ಅಪಾರವಾದಂಥ ಕಳಕಳಿಯನ್ನು ಹೊಂದಿರತಕ್ಕಂಥವರು. ಹಾಗೆಯೇ ಆ ಯೋಜನೆಗಳ ಬಗ್ಗೆ ಬಹಳ ನಿಷ್ಠೆಯನ್ನು ಹೊಂದಿರತಕ್ಕಂಥವರು. ಈಗ ಬಚಾವತ್ ತೀರ್ಪಿನ ಪ್ರಕಾರ 2000 ವರ್ಷಗಳೊಳಗಾಗಿ ಕೃಷ್ಣ ಯೋಜನೆಯು ಮುಗಿಯಬೇಕೆನ್ನತಕ್ಕಂಥಾದ್ದು ನಮ್ಮಲ್ಲರ ಅನಿಸಿಕೆ ಮತ್ತು ಬಚಾರತ್ ತೀರ್ಪಿನ ಪ್ರಕಾರ ಅದು ನಡೆಯಬೇಕಾಗಿದೆ; ಈ ಯೋಜನೆಗಳನ್ನು ಪೂರ್ಣಗೊಳಿಸುವುದಕ್ಕೆ ಸರಕಾರ ತನ್ನ ಸವಲತ್ತುಗಳನ್ನು ಮತ್ತು ಸಾಮಾಗ್ರಿಗಳನ್ನು ಏನೇನು ವ್ಯವಸ್ಥೆ ಮಾಡಿದೆ ಎನ್ನತಕ್ಕಂಥಾದ್ದು ಅತೀ ಮುಖ್ಯವಾಗಿ ಹೇಳಬೇಕು. ಮತ್ತು ಹಾಗೆಯೇ ಕಾವೇರಿ ಯೋಜನೆಯ ಬಗ್ಗೆಯೂ ಸರಕಾರದ ನಿಲುವು ಏನು ? ನ್ಯಾಯಮಂಡಳಿಯನ್ನು ಬಹಿಷ್ಕಾರ ಮಾಡುತ್ತಾರೆಯೇ ? ನ್ಯಾಯಮಂಡಳಿಯ ಮುಂದೆ ನಮ್ಮ ವಾದವನ್ನು ಮಂಡಿಸುತ್ತಾರೋ ? ಮುಂದೆ ಸರಕಾರದ ನಿಲುವು ಏನು ಎನ್ನತಕ್ಕಂಥ ವಿಚಾರವು ಒಂದು. ಮತ್ತು ನಿನ್ನೆಯ ದಿನ ಹೈದ್ರಾಬಾದ್ ಕರ್ನಾಟಕಕ್ಕೆ ಸೇರಿದ ಕೆಲವು ಶಾಸಕರು ಸಭೆ ಸೇರಿ, ನಮ್ಮ ಕೃಷ್ಣ ಮೇಲ್ದಂಡೆ ಯೋಜನೆಯು ಬಹಳ ಹಿಂದೆ ಉಳಿದಿದೆ, ನಮ್ಮ ಪ್ರದೇಶ ಕೂಡ ಬಹಳ ಹಿಂದುಳಿದೆ, ಇದರ ಬಗ್ಗೆ ನಮ್ಮ ಸರಕಾರದವರು ಪ್ರಾಮಾಣಿಕವಾಗಿ ಗಮನವನ್ನು ಹರಿಸಬೇಕೆಂದು ಅಲ್ಲಿ ಸೇರಿದ ಎಲ್ಲಾ ಪಕ್ಷದವರೂ ಮಾತನಾಡಿದ್ದಾರೆ. ಇಲ್ಲಿ ಕೃಷ್ಣಯೋಜನೆಯ ಬಗ್ಗೆ ಸರ್ಕಾರದ ನಿಲುವು ಮತ್ತು ಸ್ಥಳೀಯ ಇಂಜಿನಿಯರುಗಳಿಗೆ ಅಲ್ಲಿ ಪ್ರಾಮುಖ್ಯತೆ ಕೊಡಬೇಕೆಂಬುದನ್ನು ಬಹಳ ಮುಖ್ಯವಾಗಿ ಅವರು ಕೇಳಿದ್ದಾರೆ.

ಮತ್ತು ಅಡಳಿತ ನ್ಯಾಯಮಂಡಳಿಯವರು ಹಂಗಾಮಿಯಾಗಿ ನೇಮಿಸಿಕೊಂಡ 400 ಜನ ಇಂಜಿನೀಯರ್‌ಗಳನ್ನು ತೆಗೆದು ಹಾಕಿದ್ದು ಅವರಿಗೆ ಯಾವ ರೀತಿಯ ರಕ್ಷಣೆ ಕೊಡುತ್ತಾರೆ ಎನ್ನುವ ಬಗ್ಗೆ ಹೀಗೆ ಅನೇಕ ಸಮಸ್ಯೆಗಳು ಉದ್ಭವಾಗಿವೆ.

ಇದರ ಜೊತೆಯಲ್ಲಿ ಹೈದರಾಬಾದ್–ಕರ್ನಾಟಕದ ಅಭಿವೃದ್ಧಿಗೆ ತೀವ್ರ ಒತ್ತನ್ನು ಕೊಡಬೇಕು, ಕೊಡದೇ ಇದ್ದರೆ ರೂಪ ಬದಲಾವಣೆಯಾಗುತ್ತದೆ ಎಂಬ ಎಚ್ಚರಿಕೆಯ ಮಾತು ಮತ್ತು ಆ ಶಬ್ದಗಳನ್ನು ನಾವು ಕೇಳುತ್ತಿದ್ದೇವೆ. ಆ ಶಬ್ದಗಳು ನಮ್ಮ ಕಿವಿಗೆ ಬರದೇ ಇರಲಿ. ಕರ್ನಾಟಕ ಏಕೀಕರಣವನ್ನು ಬಹಳ ತ್ಯಾಗದಿಂದ ಬಲಿದಾನದಿಂದ ಸತ್ಯದಿಂದ ಧರ್ಮದಿಂದ ಬಹಳ ಪ್ರಾಮಾಣಿಕವಾಗಿ ಕಟ್ಟಿರ ತಕ್ಕಂತಹ ಕರ್ನಾಟಕ ಭಾಷಾವಾರು ಪ್ರಾಂತ್ಯ ಇದು ಬಹಳ ಪೂರ್ಣವಾದ ಚೈತನ್ಯಪೂರ್ಣವಾದ ರಾಜ್ಯವಾಗಿ ನಿರ್ಮಾಣವಾಗಿದೆ. ಇದಕ್ಕೆ ಅನೇಕರ ಬಲಿದಾನವಾಗಿದೆ. ತಪಸ್ಸಿನ ಮತ್ತು ತ್ಯಾಗದ ಫಲದಿಂದ ಇದು ಬಂದಿದೆ. ನಾವು ಕರ್ನಾಟಕವನ್ನು ಎಂದೆಂದೂ ಚೆಳೆಸಬೇಕು. ಆದರೆ ನಮ್ಮ ರಾಜ್ಯದ ಅನೇಕ ಭಾಗಗಳಿಗೆ ಅನ್ಯಾಯವಾಗಿದ್ದರೆ ಅದರ ಬಗ್ಗೆ ಹೋರಾಟ ಮಾಡಬೇಕೇ ಹೊರತು ಕರ್ನಾಟಕದ ಏಕೀಕರಣದ ವಿರುದ್ಧ ಮಾತಾಡುವುದು ಸಮಂಜಸವಲ್ಲ. ಆ ದೃಷ್ಟಿಯಿಂದ ಭಾವನಾತ್ಮಕವಾಗಿ ಕರ್ನಾಟಕದ ಎಲ್ಲಾ ಭಾಗದ ಜನರಿಗೆ ಅನುಕೂಲ ಮಾಡಿಕೊಡಬೇಕಾದ್ದು ಸರ್ಕಾರದ ಕರ್ತವ್ಯ. ಆ ದೃಷ್ಟಿಯಿಂದ ಹೈದರಾಬಾದ್ ಕರ್ನಾಟಕದ ಬಗ್ಗೆ ಸರ್ಕಾರದ ಕಳಕಳಿಯನ್ನು ಮಾನ್ಯ ಮುಖ್ಯಮಂತ್ರಿಗಳು ಪ್ರಕಟಿಸಬೇಕು. ಕೃಷ್ಣ ಕಾವೇರಿ ಬಗ್ಗೆ ಅವರಿಗೆ ಬಹಳ ಮಹತ್ತರವಾದ ಕಳಕಳಿ ಇದೆ ಎಂದು ನಾನು ಅಂದುಕೊಂಡಿದ್ದೇನೆ. ಅವರು ಮುಖ್ಯಮಂತ್ರಿಯಾಗುವ ಮುಂಚೆ ಹತ್ತಾರು ವರ್ಷದಿಂದ ನೀರಾವರಿ ಸಚಿವರಾಗಿದ್ದರು. ವಿರೋಧ ಪಕ್ಷದ ನಾಯಕರಾಗಿದ್ದರು, ಈ ರಾಜ್ಯದ ಉದ್ದಗಲ್ಕೂ ಕೃಷ್ಣ ಕಾವೇರಿ ಬಗ್ಗೆ ಅವರದೇ ಆದ ವ್ಯಾಖ್ಯಾನ ಮಾಡಿ ಕೃಷ್ಣ ಕಾವೇರಿ ಬಗ್ಗೆ ಹೆಚ್ಚಿನ ಹಣ ಕೊಡುತ್ತೇವೆ ಎಂಬ ಮಾತನ್ನು ಮುಖ್ಯಮಂತ್ರಿಗಳು ಹೇಳಿದ್ದಾರೆ. ಅದನ್ನು ನಾನು ನಂಬಿದ್ದೇನೆ. ಆದ್ದರಿಂದ ದಯಮಾಡಿ

ಮುಖ್ಯಮಂತ್ರಿಗಳು ಇದರ ಬಗ್ಗೆ ಸರ್ಕಾರದ ನಿಲುವನ್ನು ಹೇಳಬೇಕೆಂದು ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ರೂಲ್ 60 ಕೆಳಗೆ ನಾವು ನಿಲುವಳಿ ಸೂಚನೆ ಕೊಟ್ಟ ಉದ್ದೇಶ ಇಷ್ಟೇ, ರಾಜ್ಯದಲ್ಲಿ ಜನತಾದಳ ಸರ್ಕಾರದ ಬಂದ ಮೇಲೆ ಅನೇಕ ಕಡೆ ಗಲಭೆ ಕೊಲೆಗಳೇನಾಗುತ್ತಿವೆ.....

(ಆಡಳಿತ ಪಕ್ಷದ ಸದಸ್ಯರು ವಿರೋಧ ವ್ಯಕ್ತಪಡಿಸಿದರು)

(ಗೊಂದಲ)

ಶ್ರೀ ಎಚ್.ಡಿ. ದೇವೇಗೌಡ: ಮಾನ್ಯ ಅಧ್ಯಕ್ಷರೇ ಈ ಸದನದಲ್ಲಿ ನಾನು ಆಳುವ ಪಕ್ಷದ ಸದಸ್ಯರಲ್ಲಿ ವಿನಂತಿ ಮಾಡುತ್ತೇನೆ. ಅವರು ಯಾವುದೇ ರೀತಿಯ ಆಪಾದನೆಗಳನ್ನು ಆದು ಕಾನೂನು ಪ್ರಶ್ನೆ ಇರಬಹುದು. ಗಲಭೆ ಪ್ರಶ್ನೆ ಇರಬಹುದು. ನಿಮ್ಮ ಅನುಮತಿ ಪಡೆದು ಹೇಳಲಿಕ್ಕೆ ಅವಕಾಶ ಪಡೆದಾಗ, ಅವರು ಏನು ಹೇಳಬೇಕೋ ಅದನ್ನು ಹೇಳಲಿ, ಅದಕ್ಕೆ ಉತ್ತರ ಕೊಡುವ ಶಕ್ತಿಯೂ ಸರ್ಕಾರಕ್ಕಿದೆ ಎಂಬುದನ್ನು ನೀವು ಗಮನದಲ್ಲಿಟ್ಟುಕೊಳ್ಳಬೇಕು. ವಿರೋಧಪಕ್ಷದ ಮುಖಂಡರು ಏನೇ ಮಾತನಾಡಿದರೂ ಅದಕ್ ಅಡ್ಡಿ ಬರಕೂಡದು. ನಮ್ಮ ಪಕ್ಷದ ವತಿಯಿಂದ ಅದು ಆಗಬಾರದೆಂದು ನಾನು ವಿನಂತಿ ಮಾಡುತ್ತೇನೆ.

SRI QUAMARUL ISLAM: Sir, because Mr. Vatal Nagaraj raised an issue of...

(ಗೊಂದಲ)

ಅಧ್ಯಕ್ಷರು: ಖರ್ಗೆಯವರೇ ತಾವೇನು ನಿಲುವಳಿ ಸೂಚನೆ ಕೊಟ್ಟಿದ್ದೀರಿ ಅದನ್ನು ನಾನು ಗಮನಿಸಿದ್ದೇನೆ. ಪ್ರಶ್ನೋತ್ತರ ಅವಧಿ ಇಲ್ಲದೇ ಇರುವುದರಿಂದ ಪೇಪರ್ಸನ್ನು ಲೇ ಮಾಡಿದ್ದೇವೆ. ಜೀರೊ ಅವರ್‌ನಲ್ಲಿ ಪ್ರಮುಖವಾದ ವಿಷಯ ಒಂದೆರಡು ಇವೆ. ಅವನ್ನು ಪ್ರಸ್ತಾಪಮಾಡಿದ ತಕ್ಷಣ we are not transacting any business we are taking up the adjournment motion only. We are proceeding as per the rules. ತಮಗೆ ಏನು ಭಾವನೆ ಬಂದಿದೆ ಎಲ್ಲಾ ಬಿಸಿನೆಸ್ಸನ್ನೂ ಮುಂದಕ್ಕೆ ಹಾಕಿ ಇದನ್ನು ತೆಗೆದುಕೊಳ್ಳಬೇಕು ಎಂದು, that is not correct. Since the question hour is not there in the agenda, we are now taking up only by one. Immediately after the zero hour, we are considering the notice given by the Hon'ble Members about this kindly bear with me.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಅದನ್ನು ನಾನು ಒಪ್ಪಿಕೊಂಡೆ. ಅದರ ಬಗ್ಗೆ ನಮಗೆ ಸಂಶಯವಿಲ್ಲ. ಅವರು ಎತ್ತಿದಂಥ ವಿಷಯಕ್ಕೂ ಕೂಡ ಪ್ರಾಮುಖ್ಯತೆ ಇದೆ.

ಆದರೆ ಕೇವಲ ಅವರು ಒಬ್ಬರೇ ಮಾತನಾಡತಕ್ಕಂಥಾದ್ದು ಅಥವಾ ಅದಕ್ಕೆ ಉತ್ತರ ಕೊಟ್ಟ ಮೇಲೆ ನಾವು ಕೊಡತಕ್ಕಂಥಾದ್ದಲ್ಲ. ಏಕೆಂದರೆ, ಹೈದರಾಬಾದ್–ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್ ಬಗ್ಗೆ ಮಾತನಾಡಿದ್ದಾರೆ. ಕೃಷ್ಣಾ, ಕಾವೇರಿ ಬೇಸಿನ್ ಬಗ್ಗೆ ಮಾತನಾಡಿದ್ದಾರೆ ಈ ಎಲ್ಲಾ ವಿಚಾರಗಳಿಗೂ ತಕ್ಷಣ ಉತ್ತರ ಕೊಟ್ಟ ಮೇಲೆ ಮತ್ತೆ ಮುಂದೆ ಯಾರೂ ಮಾತನಾಡಬಾರದೆಂದು ಹೇಳುವುದು ಅಷ್ಟು ಸಮಂಜಸವಾಗುವುದಿಲ್ಲ. ಆದ್ದರಿಂದ ಅದಕ್ಕಾಗಿ ಅರ್ಧ ಗಂಟೆ ಚರ್ಚೆಗೆ ಹಾಕಿ ಎಲ್ಲರೂ ಪಾರ್ಟಿಸಿಪೇಟ್ ಮಾಡೋಣ. ಈಗತಾನೆ ಅವರು ಶೂನ್ಯ ವೇಳೆಯಲ್ಲಿ ಎತ್ತಿದ ತಕ್ಷಣ ಅದಕ್ಕೆ ಅವರು ಉತ್ತರ ಕೊಟ್ಟ

ಮೇಲೆ ಅದು ಅಲ್ಲಿಗೇ ಮುಕ್ತಾಯರಾಗುತ್ತದೆ. ಆದ್ದರಿಂದ ಅರ್ಧ ಗಂಟೆ ಚರ್ಚೆಗೆ ಇಲ್ಲವೇ ಷಾರ್ಟ್ ಡ್ಯೂರೇಷನ್ ಚರ್ಚೆಗೆ ನಿಯಮ 69ರ ಕೆಳಗೆ ತೆಗೆದುಕೊಳ್ಳಿ.

ಅಧ್ಯಕ್ಷರು: ತಾವು ಹಿರಿಯ ಸದಸ್ಯರ್ದ್ದೀರಿ. ಅವರು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಮಾತ್ರ ಸೀಮಿತವಾದ ಉತ್ತರವನ್ನು ಕೊಡುತ್ತಾರೆ. ತಾವು ಅದೇ ಪ್ರಾಂತ್ಯದವರು, ಅದೇ ಪ್ರದೇಶದವರದ್ದರಿಂದ ಎಲ್ಲಾ ವಿಷಯಗಳನ್ನು ಸವಿಸ್ತಾರವಾಗಿ ಈ ಸದನದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಸಾಕಷ್ಟು ಅವಕಾಶಗಳು ತಮಗೆ ಸಿಗುತ್ತವೆ. ತಮ್ಮ ಭಾವನೆ ನನಗೆ ಅರ್ಥವಾಗುತ್ತಿವೆ. ಅವರು ಎತ್ತಿರತಕ್ಕಂಥಹ ವಿಚಾರಗಳಿಗೆ ಸೀಮಿತವಾಗಿ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ.

SRI QUMARUL ISLAM: The issue has been raised in zero Hour ie., regarding Hyderabad–Karnatak Area Development. Sir in the year 1956 the Hyderabad–karnataka Area..

MR. SPEAKER: Kindly resume your seat. This is Zero Hour cannot become the subject matter for general discussion. I am not willing to allow. Kindly resume your seat. It is my appeal. Let us take up this matter on some other occasion. Please co–operate with the Chair. Let us go ahead with the business.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ನಮ್ಮ ವಿರೋಧಪಕ್ಷದ ನಾಯಕರು ನಮ್ಮ ಪಕ್ಷದ ಒಂದು ನಿಲುವಳಿ ಸೂಚನೆಯನ್ನು ತಂದಿದ್ದಾರೆ. ಅವರು ಇಲ್ಲಿ ನಿಲುವಳಿ ಸೂಚನೆ ತಂದಿರಬೇಕಾದರೆ ಯಾವುದೇ ಬಿಜಿನೆಸ್ ಅನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಮುಂಚೆ ಅದನ್ನು ಕೈಗೆತ್ತಿಕೊಳ್ಳಬೇಕಾಗುತ್ತದೆ. ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾಪವಾದ ಮೇಲೆ ಉತ್ತರವನ್ನೂ ಶೂನ್ಯ ವೇಳೆಯಲ್ಲಿ ಕೊಡಬೇಕೆಂದು ಅಲ್ಲ. ಅದಕ್ಕೆ ಕಾಲಾವಕಾಶವನ್ನು ತೆಗೆದುಕೊಂಡು ಉತ್ತರ ಕೊಡಲಿಕ್ಕೆ ಅವಕಾಶ ಇದೆ. ನಿಯಮ 60ರ ಅಡಿಯಲ್ಲಿ ತಂದಿರತಕ್ಕಂತಹ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ದಯವಿಟ್ಟು ತಾವು ಅವಕಾಶ ಕೊಡಬೇಕು. ಆದ್ಯತೆ ಮೇಲೆ ತೆಗೆದುಕೊಳ್ಳಬೇಕು. ತಾವು ನಮ್ಮ ರಕ್ಷಣೆಗೆ ಬರಬೇಕು ಎಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ತಾವು ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಜಯಚಂದ್ರ ಅವರು ಈ ಸಭೆಗೆ ಹೊಸಬರಲ್ಲ ವಕೀಲರಾಗಿದ್ದಾರೆ. ನಿಯಮಾವಳಿಗಳನ್ನು ತಾವು ಮತ್ತೊಮ್ಮೆ ಅವಲೋಕನ ಮಾಡಬೇಕು. ನಾನು ಅವಕಾಶ ನಿರಾಕರಣೆ ಮಾಡಿಲ್ಲ. ಬಿಸಿನೆಸ್ ಎಲ್ಲವನ್ನೂ ಮುಂದಕ್ಕೆ ಹಾಕಿ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದೀರಿ. ಅದು ಯಾವ ಸಂದರ್ಭದಲ್ಲಿ ಎಂದು ತಾವು ಗಮನಿಸಬೇಕು. ಸದನ ನಡೆಯುವುದಕ್ಕೆ ಅವಕಾಶ ಮಾಡಿಕೊಡಿ.

SRI QUMARUL ISLAM: I want categorical reply regarding 450 Contract Engineers who have been appointed by the previous Government and somebody has gone to the Supreme Court in this regard. I want a categorical reply from the Hon'ble Chief Minister regarding these Engineers.

ಶ್ರೀ ಹೆಚ್.ಎನ್. ನಂಜೇಗೌಡ: ಮಾನ್ಯ ಅಧ್ಯಕ್ಷರೆ, ತುರ್ತಾದಂತಹ ರಾಜ್ಯದ ಭವಿಷ್ಯವನ್ನು ನಿರ್ಧರಿಸತಕ್ಕಂತಹ ಸಮಸ್ಯೆಗಳ ಬಗ್ಗೆ ಮಾನ್ಯ ವಾಟಳ್‌ನಾಗರಾಜ್‌ರವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದಾರೆ. ತುಂಬಾ ಸಂತೋಷ, ಅದಕ್ಕಾಗಿ ಅವರಿಗೆ ಅಭಿನಂದಿಸುತ್ತೇನೆ. ಈ ವಿಚಾರದ ಬಗ್ಗೆ

ಉತ್ತರ ಕೊಡುತ್ತಾರೆ. ಲೋಕಸಭೆಯಲ್ಲೂ ಕೂಡ ನಾವು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡುತ್ತೇವೆ. ಮಾನ್ಯ ವಾಟಾಳ್‌ನಾಗರಾಜ್‌ರವರಷ್ಟಕ್ಕೆ ಮಾತ್ರ ಚರ್ಚೆ ಸೀಮಿತ ಆಲ್ಲ. ಶೂನ್ಯವೇಳೆಯಲ್ಲಿ ಉತ್ತರ ಕೊಟ್ಟಾದ ಮೇಲೆ ನಾವು ಸಬ್‌ಸ್ಟ್ಯಾನಿಷಿಯಲ್ ಮೋಷನ್ ಅನ್ನು ತರುವು ಅವಕಾಶವಿಲ್ಲ. ಈ ವಿಚಾರ ಅಷ್ಟೊಂದು ಸುಲಭದಲ್ಲಿ ಹೋಗಬಾರದು. ನಾವೆಲ್ಲ ಮಾತನಾಡಿಕೊಂಡೇ ಕಳಿಸುವುದು. ನಮ್ಮ ಪಕ್ಷದ ವತಿಯಿಂದಲೂ ನಾವು ಮಾತನಾಡಿಕೊಂಡೆವು. ಹೊಸ ಸರಕಾರ ಮೊದಲು ಆಸಕ್ತ ಶಾಸಕರ ಸಭೆ ಕರೆದು ಈ ರಾಜ್ಯ ಸಮಸ್ಯೆಗಳ ಬಗ್ಗೆ ನಮ್ಮನ್ನೆಲ್ಲ ನಂಬಿಕೆಗೆ ತೆಗೆದುಕೊಂಡು ಏನು ಮಾಡುತ್ತಾರೆಂಬುದನ್ನು ತಿಳಿಸುತ್ತಾರೆ ಎಂದು ನಾವು ನಿರೀಕ್ಷೆ ಮಾಡಿದ್ದೇವೆ. ಇನ್ನು ಪಾಲಿಸಿ ಮ್ಯಾಟರ್ ಇದ್ದಾರೆ ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡುವ ಕಾಲದಲ್ಲಿ ನಮ್ಮ ಅಭಿಪ್ರಾಯ ಹೇಳುವುದಿದೆ. ಆದರೆ ಹೊಸ ಸರಕಾರ ತನ್ನ ನಿಲುವು ತೆಗೆದುಕೊಳ್ಳಬೇಕಾದರೆ ಆ ನಿಲುವು ಏನೆಂದು ಹೇಳಿದ್ದಾರೆ. ಏಕೆಂದರೆ ಅವರು ಟ್ರಿಬ್ಯುನಲ್ ಮುಂದೆ ತಮ್ಮ ನಿಲುವು ಏನು ಇರಬೇಕೆಂದು ಹೇಳಿದ್ದಾರೆ. ಇನ್ನೂ ಅನೇಕ ಇವೆ. Arithemtic errors also were not rectified by the previous Government before the Tribunal. Let us know that fact.

ನಾವು ಹೇಳಿ ಮಾಡುವ ಕೆಲಸವಲ್ಲ ಇದು. ಸರ್ಕಾರದ ತನ್ನಿಂದ ತಾನೇ ಈ ಸಭೆಯ ಸದಸ್ಯರ, ಕೆಲವು ಆಸಕ್ತ ಸದಸ್ಯರ ಅಥವಾ ಆ ಜಲಾನಯನ ಪ್ರದೇಶದಲ್ಲಿರತಕ್ಕಂಥ ಸದಸ್ಯರ ಸಭೆ ಕರೆದು ಇದನ್ನು ಅಲ್ಲಿ ಚರ್ಚಿಸಿ ತದನಂತರ ಈ ಸಭೆಯಲ್ಲಿ ಬಹುಶಃ ಸರ್ಕಾರವೇ ಒಂದು ರೆಸಲ್ಯೂಷನ್ ಮುಖಾಂತರ ಈ ವಿಚಾರವನ್ನು ತಂದು ಚರ್ಚೆ ಮಾಡತಕ್ಕಂಥದ್ದು ಎಂದು ನಾವು ನಿರೀಕ್ಷೆ ಮಾಡಿದ್ದೇವೆ. ಈಗಲೂ ಕೂಡ ಅದನ್ನೇ ಮಾಡತಕ್ಕಂಥದ್ದು ಸೂಕ್ತ ಎಂದು ನನ್ನ ಅಭಿಪ್ರಾಯ.

MR. SPEAKER: I welcome this....

† ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿಗಳು): ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ವಾಟಾಳ್ ನಾಗರಾಜ್‌ರವರು ಈ ಸಭೆಯ ಗೌರವಾನ್ವಿತ ಸದಸ್ಯರು ಎತ್ತಿರತಕ್ಕಂಥ ವಿಷಯ ಶೂನ್ಯ ವೇಳೆಯಲ್ಲಿ ಹಾರಿಕೆ ಉತ್ತರ ಕೊಟ್ಟು ಸಮಸ್ಯೆ ಬಗೆಹರಿಸುವುದಕ್ಕೆ ಸಾಧ್ಯವಿಲ್ಲ. ಇಷ್ಟಾದರೂ ತಿಳಿವಳಿಕೆ ಸರ್ಕಾರಕ್ಕೆ ಇದೆ. ಶೂನ್ಯ ವೇಳೆಯಲ್ಲಿ ಅವರು ಪ್ರಸ್ತಾಪಮಾಡಿರತಕ್ಕಂಥದ್ದು ತಾವು ಅನುಮತಿ ಕೊಟ್ಟಿರುವ ಬಗ್ಗೆ ಸರ್ಕಾರದ ಆಕ್ಷೇಪ ಏನೂ ಇಲ್ಲ. ಆದರೆ ಒಂದು ವಿಷಯವನ್ನು ನಾನು ಈ ಸಂದರ್ಭದಲ್ಲಿ ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ರಾಜ್ಯಪಾಲರ ಭಾಷಣದಲ್ಲಿ ಇದೇ ವಿಷಯಪ್ರಸ್ತಾಪವಾಯಿತು. ತಾವು ಕೂಲಂಕುಷವಾಗಿ ತಮ್ಮ ಭಾವನೆಗಳನ್ನು ವ್ಯಕ್ತಪಡಿಸುವುದಕ್ಕೆ ಅವಕಾಶ ಇದೆ. ಆದರಿಂದ ರಾಜ್ಯಪಾಲರ ಭಾಷಣದ ಮೇಲೆ ನಡೆದ ಚರ್ಚೆಗೆ ಉತ್ತರ ಕೊಡುವಾಗ ಎಲ್ಲಾ ವಿಷಯಗಳನ್ನು ಸರ್ಕಾರ ಈ ಸಭೆಯ ಮುಂದೆ ಇಡುರುದಕ್ಕೆ ಪ್ರಯತ್ನ ಮಾಡುತ್ತದೆ. ಈ ಸದನವನ್ನು ಮರೆಮಾಚಿ ಯಾವುದನ್ನೂ ಮಾಡಬೇಕಾದದ್ದಿಲ್ಲ. ಆದರೆ ಮೂರು ವಿಷಯಗಳನ್ನು ನೀವು ಎತ್ತಿದ್ದೀರಿ. ಒಂದು, ಹೈದರಾಬಾದ್–ಕರ್ನಾಟಕ ಅಭಿವೃದ್ಧಿ ನಿಗಮದ ವ್ಯಾಪ್ತಿಯಲ್ಲಿ ಆಗತಕ್ಕಂಥ ಕೆಲಸಗಳ ಬಗ್ಗೆ ನೂತನವಾಗಿ ಆಯ್ಕೆಯಾಗಿ ಬಂದಿರುವ ಶಾಸಕರು ವ್ಯಕ್ತಪಡಿಸಿರತಕ್ಕಂಥ ಕಳವಳ, ಮತ್ತೊಂದು ಕೃಷ್ಣಾ ಜಲಾನಯನದ ನೀರಿನ ಬಳಕೆಯ ವಿಷಯ. ಮೂರನೆಯದು, ಅಲ್ಲಿ ಕೆಲಸ ಮಾಡಲಿಕ್ಕೆ ತಾತ್ಕಾಲಿಕವಾಗಿ ನೇಮಕ ಮಾಡಿರತಕ್ಕಂಥ ಸಿಬ್ಬಂದಿಯ ವಿಷಯ. ಈ ಮೂರು ವಿಷಯಗಳನ್ನು ಪ್ರಸ್ತಾಪಮಾಡಿದ್ದಾರೆ. ನಾನು ಇಷ್ಟೇ ಹೇಳುವುದ್ಕಕೆ ಇಚ್ಛಿಪಡುತ್ತೇನೆ. ಕೃಷ್ಣಾ ಜಲಾನಯನದ ನೀರನ್ನು ಬಳಕೆ ಮಾಡುವುದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವುದನ್ನು ಹಾರಿಕೆಯ ಉತ್ತರದಲ್ಲಿ ಹೇಳುವುದಕ್ಕಾಗುವುದಿಲ್ಲ. ರಾಜ್ಯಪಾಲರ ಭಾಷಣದ ಮೇಲೆ ಉತ್ತರ ಕೊಡುವಾಗ ತಮ್ಮ ಅನುಮತಿಯಿಂದ ಈ ಸಭೆಗೆ ಎಲ್ಲಾ ಮಾಹಿತಿಗಳನ್ನು ಒದಗಿಸುವುದಕ್ಕೆ ನಾನು ಸಿದ್ಧನಿದ್ದೇನೆ ಎನ್ನುವ

ಒಂದು ಮಾತನ್ನು ತಮ್ಮ ಮುಖೇನ ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ತಿಳಿಯಬಯಸುತ್ತೇನೆ. ಸಿಬ್ಬಂದಿಯ ವಿಷಯದ ಬಗ್ಗೆ ಈಗಾಗಲೇ ಒಂದು ನ್ಯಾಯಾಲಯದಲ್ಲಿ ಅವರ ನೇಮಕಾತಿ ವಿರುದ್ಧ ರದ್ದುಮಾಡಿ ತೀರ್ಮಾನಮಾಡಿದ್ದಾರೆ. ಅವರು ಡೆಲಿಗೇಷನ್ ನನ್ನ ಹತ್ತಿರ ಬಂದಿದ್ದರು. ಅವರಿಗೆ ಹೇಳಿದ್ದೇನೆ. ನೀವು ಸರ್ವೋಚ್ಚ ನ್ಯಾಯಾಲಯದ ಮುಂದೆ ಹೋಗಿ, ಈ ನ್ಯಾಯಾಲಯ ಏನು ಆಜ್ಞೆ ಮಾಡಿದ್ದಾರೆ. ಅದರ ಬಗ್ಗೆ ಪರಿಹಾರ ಕಂಡುಹಿಡಿದುಕೊಳ್ಳುವುದಕ್ಕೆ ನೀವು ಪ್ರಯತ್ನ ಮಾಡಬೇಕು. ಈ ಸರ್ಕಾರ ನಾವು ನ್ಯಾಯಾಲಯದ ಆಜ್ಞೆಯನ್ನು ಪಾಲಿಸಬೇಕಾಗುತ್ತದೆ. ಅದಕ್ಕೆ ನಿಮಗೆ ಸ್ವಲ್ಪಕಾಲ ಸಮಯ ಕೊಡುವುದಕ್ಕೆ ನಾನು ಸಿದ್ಧನಿದ್ದೇನೆ ಎನ್ನುವ ಮಾತನ್ನು ಹೇಳಿದ್ದೇನೆ. ಅಲ್ಲಿಯವರೆಗೆ ಸ್ವಲ್ಪ ದಿನ ಈ ನ್ಯಾಯಾಲಯದ ತೀರ್ಪನ್ನು ನಾವು ಜಾರಿಗೆ ಕೊಡತಕ್ಕಂಥದ್ದರಲ್ಲಿ ಸರ್ಕಾರ ಸ್ವಲ್ಪ ವಿಳಂಬ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ. ಆದರೆ ಅದು ಬಹಳ ದಿನ ಮಾಡುವುದಕ್ಕೆ ಸಾಧ್ಯವಿಲ್ಲ.

ಅವರು ಸುಪ್ರೀಮ್ ಕೋರ್ಟ್ ಮುಂದೆ ಹೋಗಬೇಕಾಗುತ್ತದೆ. ಅಲ್ಲಿ ಅವರು ಪರಿಹಾರವನ್ನು ದೊರಕಿಸಿಕೊಳ್ಳಬೇಕಾಗುತ್ತದೆಂದಷ್ಟಕ್ಕೆ ನಾನು ಈ ಸಂದರ್ಭದಲ್ಲಿ ನನ್ನ ಉತ್ತರವನ್ನು ಸೀಮಿತಗೊಳಿಸಲಿಚ್ಛಿಸುತ್ತೇನೆ. ಇನ್ನು ಹೈದ್ರಾಬಾದ್–ಕರ್ನಾಟಕ ಅಭಿವೃದ್ಧಿ ನಿಗಮದ ವ್ಯಾಪ್ತಿಯಲ್ಲಿ ಬರತಕ್ಕಂಥ ಕೆಲಸಗಳ ಬಗ್ಗೆ ಹೇಳುವುದಾದರೆ, ಆ ನಿಗಮವನ್ನು ಮಾಜಿ ಮುಖ್ಯಮಂತ್ರಿಗಳು ನನ್ನ ಕೂಸು ಎಂದು ಹೇಳಿದ್ದನ್ನು ಪತ್ರಿಕೆಗಳಲ್ಲಿ ಓದಿದ್ದೇನೆ. ಅಲ್ಲಿ ಏನೇನು ಅಕ್ರಮಗಳು ನಡೆಯುತ್ತವೆಯೆಂದು ಅವರೇ ಹೇಳಿದ್ದಾರೆ. ಅದನ್ನು ನಾನು ನೋಡಿಲ್ಲ. ಇನ್ನೆರಡು ದಿನಗಳ ಈ ಸಭೆಯ ಕಾರ್ಯಕಲಾಪಗಳು ಮುಗಿದಮೇಲೆ ಸರ್ಕಾರ ಇದರ ಬಗ್ಗೆ ತೀವ್ರವಾದಂಥ ರೀತಿಯಲ್ಲಿ ಕ್ರಮತೆಗೆದುಕೊಳ್ಳುತ್ತದೆ. ಈ ರಾಜ್ಯದ ಯಾವುದೇ ಭಾಗಕ್ಕೆ ಅನ್ಯಾಯವಾಗಲು ಬಿಗುವುದಿಲ್ಲವೆನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ,.....

ಅಧ್ಯಕ್ಷರು: ಶೂನ್ಯ ವೇಳೆಯಲ್ಲಿ ಎರಡು ಮೂರು ಸಣ್ಣ ಸಣ್ಣ ವಿಷಯಗಳಿವೆ. They will not take more time. Immediately after that you may raise that issue..

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಎಲ್ಲರೂ ಶೂನ್ಯ ವೇಳೆಯಲ್ಲಿ ಮಾತನಾಡಿ ಅದಕ್ಕೆ ಉತ್ತರವನ್ನು ಪಡೆದುಕೊಳ್ಳುತ್ತಾ ಹೋದರೆ ಇದರ ಮಹತ್ವವೇನು ಉಳಿಯುತ್ತದೆ? ಯಾರೋ ಒಬ್ಬರು ವಿಷಯವನ್ನು ಎತ್ತಿದ್ದಾರೆಂದು ತಾವು ಅನುಮತಿಯನ್ನು ಕೊಟ್ಟಿದ್ದೀರೆಂದರೆ, ಪ್ರತಿಯೊಂದು ಪ್ರಾಮುಖ್ಯವಾದ ವಿಷಯಗಳನ್ನು ಇಲ್ಲಿ ನಾವು ಎತ್ತುವುದು, ಅದಕ್ಕೆ ಇಲ್ಲೇ ಉತ್ತರ ಕೊಡುವುದು. ನಾವು ಪುನಃ ಅದರ ಬಗ್ಗೆ ಸದನದಲ್ಲಿ ಚರ್ಚೆ ಮಾಡಬೇಕಾದರೆ ಒಂದು ಸಲ ಉತ್ತರವನ್ನು ಕೊಟ್ಟಮೇಲೆ ಪುನಃ ಅದಕ್ಕೆ ಉತ್ತರವನ್ನು ಕೊಡಲು ಬಹುವುದಿಲ್ಲವೆನ್ನತಕ್ಕದ್ದು ಬರುತ್ತದೆ.

ಶ್ರೀ ವಾಟಾಳ್‌ನಾಗರಾಜ್: ಇದು ತಮ್ಮ ಸರ್ಕಾರವಿದ್ದ ಕಾಲದಲ್ಲಿ ಆಗಿದೆ. ಶೂನ್ಯ ವೇಳೆಯಲ್ಲಿ ನಾವು ಕೇಳುತ್ತಿದ್ದೆವು ತಾವು ಹೇಳುತ್ತಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ತಮಗೆ ಗೊತ್ತಿರುವಂತೆ ನಿಲುವಳಿ ಸೂಚನೆ ಇದ್ದಾಗ ನಾವು ಚರ್ಚೆ ಮಾಡುವಾಗ ನಿಮಗೆ ಅನೇಕ ಸಲ ಅವಕಾಶವನ್ನು ಮಾಡಿಕೊಟ್ಟಿದ್ದೇವೆ. ಅದನ್ನು ಮಧ್ಯದಲ್ಲಿ ಎದ್ದುನಿಂತುಕೊಂಡು ಯಾರು ಕೇಳಲಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ: (ವಿರೋಧ ಪಕ್ಷದ ನಾಯಕರು) ಸನ್ಮಾನ್ಯ ಅಧ್ಯಕ್ಷರೆ, ಒಂದು ಪ್ರಮುಖವಾದ ವಿಷಯವನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಲು ಪ್ರಯತ್ನಮಾಡುತ್ತಿದ್ದೇನೆ. ಗ್ರಾಮೀಣ ಜನತೆಗೆ ಒಂದಲ್ಲಾ ಒಂದು ರೀತಿಯಲ್ಲಿ ಕಿರುಕುಳವನ್ನು

ಕೊಡತಕ್ಕದ್ದೆ ತಮ್ಮ ಕರ್ತವ್ಯವೆಂದು ಅರಣ್ಯ ಇಲಾಖೆ ಅಧಿಕಾರಿಗಳು ಭಾವಿಸಿದ್ದಾರೆ. ಜನತಾದಳ ಅಧಿಕಾರದಲ್ಲಿದ್ದಂಥ ಕಾಲದಲ್ಲಿ ಉಡುಪಿ ತಾಲ್ಲೂಕಿನ ಅಲೆಊರು ಗ್ರಾಮದ ಸರ್ವೆ ನಂ: 7 ಮತ್ತು 127ರಲ್ಲಿ ಮತ್ತು ಅದೇ ತಾಲ್ಲೂಕಿನ ಬಡಗಬೆಟ್ಟು ಗ್ರಾಮದ ಸರ್ವೆ ನಂ: 87ರಲ್ಲಿ ಉದಯವಾಣಿಯಲ್ಲಿ ಕೆಲಸ ಮಾಡತಕ್ಕಂಥ ಪತ್ರಕರ್ತರಿಗೆ ಮತ್ತು ಅವರ ಸಿಬ್ಬಂದಿಯವರಿಗೆ ಮತ್ತು ಅಲ್ಲಿರತಕ್ಕಂಥ ಸಾವಿರಾರು ಕಾರ್ಮಿಕರಿಗೆ ಆಶ್ರಯ ಮತ್ತು ಬೇರೆ ಬೇರೆ ಯೋಜನೆಗಳಲ್ಲಿ ನಿವೇಶನವನ್ನು ವಿತರಣೆ ಮಾಡಿದ್ದೀರಿ. ಈ ರೀತಿ ಅಧಿಕೃತವಾಗಿ ಹಂಚಲ್ಪಟ್ಟಿರತಕ್ಕಂಥ ನಿವೇಶನಗಳನ್ನು ಹಿಂದಕ್ಕೆ ಪಡೆಯುವುದಕ್ಕೆ 'ಡಿ' ನೋಟಿಫಿಕೇಷನ್‌ನನ್ನು ಅರಣ್ಯ ಇಲಾಖೆ ನಿವೇಶನದಾರರಿಗೆ ಕೊಟ್ಟಿದೆ. ನಿವೇಶನದಾರರು ಆ ಜಾಗದಲ್ಲಿ ಈಗಾಗಲೇ ಪಾಯವನ್ನು ತೆಗೆದು ಮನೆಗಳನ್ನು ಕಟ್ಟತಕ್ಕಂಥ ಕೆಲಸ ಮಾಡುತ್ತಿದ್ದಾರೆ. ಆದಾಗ್ಯೂ ಅರಣ್ಯ ಇಲಾಖೆಯವರು ಅವರಿಗೆ ಕಿರುಕುಳವನ್ನು ಕೊಡುತ್ತಿದ್ದಾರೆ. ಆದಾಗ್ಯೂ ಅರಣ್ಯ ಇಲಾಖೆಯವರು ಅವರಿಗೆ ಕಿರುಕುಳವನ್ನು ಕೊಡುತ್ತಿದ್ದರು. ಆದರೆ ಇತ್ತೀಚೆಗೆ ತಮ್ಮ ಸರ್ಕಾರಅಧಿಕಾರಕ್ಕೆ ಬಂದ ಒಂದು ವಾರದಿಂದೀಚೆಗೆ, ಅದು ತಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ, ಅರಣ್ಯ ಇಲಾಖೆಯವವು ಅಲ್ಲಿಗೆ ಹೋಗಿ ಮನೆಗಳನ್ನು ಕಟ್ಟುತ್ತಿರುವ ಜಾಗದಲ್ಲಿ ಬೇಲಿಯನ್ನು ಹಾಕಿ ಗಿಡಗಳನ್ನು ನೆಡತಕ್ಕಂಥ ಕೆಲಸವನ್ನು ಪ್ರಾರಂಭ ಮಾಡಿದ್ದಾರೆ. ಇವತ್ತು ಆ ಉದಯವಾಣಿ ಪತ್ರಿಕೆಯ ಸುಮಾರು ಒಂದೂವರೆ ಸಾವಿರ ಜನರು ಸಿಬ್ಬಂದಿವರ್ಗ ಅಲ್ಲಿನ ತಹಶೀಲ್ದಾರರ ಕಛೇರಿಯ ಮುಂದೆ ಸತ್ಯಾಗ್ರಹ, ಧರಣಿ ಪ್ರಾರಂಭ ಮಾಡಿದ್ದಾರೆ. ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ತಕ್ಷಣ ನಿಮ್ಮ ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಸೂಚನೆಯನ್ನು ಕಳಿಸಿಕೊಟ್ಟು ಈ ರೀತಿ ನಿವೇಶನಗಳನ್ನು ಪಡೆದಿರುವ ಜಾಗದಲ್ಲಿ ಗಿಡಗಳನ್ನು ನೆಟ್ಟು ನಿವೇಶನದಾರರಿಗೆ ಏನು ಕಿರುಕುಳವನ್ನು ಕೊಡುತ್ತಿದ್ದಾರೆ ಈ ಪ್ರವೃತ್ತಿ ಕೊನೆಯಾಗಬೇಕು. ಮುಖ್ಯಮಂತ್ರಿಗಳು ಹೇಳಿಕೆಯನ್ನು ಕೊಟ್ಟಿದ್ದಾರೆ. ಈ ರಾಜ್ಯದಲ್ಲಿ ಅರಣ್ಯ ಇಲಾಖೆಗೆ ಸಂಬಂಧಪಟ್ಟಿರುವ ಜಮೀನುಗಳನ್ನು 25–30 ವರ್ಷಗಳಿಂದ ಕಡುಬಡವರು, ಹರಿಜನಗಿರಿಜನರು, ಹಿಂದುಳಿದವರು ಅನಧಿಕೃತವಾಗಿ ಸಾಗುವಳಿ ಏನು ಮಾಡಿಕೊಂಡು ಬಂದಿದ್ದಾರೆ ಅದನ್ನು ಸರ್ಕಾರ ಅರಣ್ಯ ಇಲಾಖೆಗೆ ವರ್ಗಾವಣೆ ಮಾಡಿಕೊಟ್ಟು ಅವರಿಗೆ ಜಮೀನುಗಳನ್ನು ಕೊಡಬೇಕು ಎನ್ನತಕ್ಕ ದಿಟ್ಟನಿಲುವನ್ನು ತಾವು ತೆಗೆದುಕೊಳ್ಳುತ್ತಿರೋ ?

ಬಹಳ ವರ್ಷಗಳಿಂದ ಈ ಹೋರಾಟ ನಡೆಯುತ್ತಿತ್ತು. ಬಹುಶಃ ನಿಮ್ಮ ಕಾಲದಲ್ಲಿ ಅದಕ್ಕೆ ಮುಕ್ತತೆ ಸಿಕ್ಕು ಆ ಬಡವರು ಜಮೀನನ್ನು ಮಾಡತಕ್ಕ ಹಕ್ಕು ಸಿಗುತ್ತದೆಂದು ನಾನು ಭಾವಿಸುತ್ತೇನೆ. ಇಂಥ ಸಮಯದಲ್ಲಿ ಎಲ್ಲಿ ವಿಶಾಲವಾದ ಭೂಮಿ ಇದೆ. ಅಲ್ಲಿ ಅರಣ್ಯವನ್ನು ಬೆಳೆಸಲು ನಮ್ಮ ಅಧಿಕಾರಿಗಳು ಸಿದ್ಧರಾಗಿಲ್ಲ, ಗಿಡಗಳನ್ನು ನೆಡಲು ಸಿದ್ಧರಾಗಿಲ್ಲ, ಕಾಡನ್ನು ಉಳಿಸಿಕೊಳ್ಳಲು ಸಿದ್ಧರಾಗಿಲ್ಲ. ಉಡುಪಿಯ ಸುತ್ತಮುತ್ತಲ ಗ್ರಾಮಗಳಲ್ಲಿ ಕಡುಬಡವರಿಗೆ ಸರ್ಕಾರ ಅಧಿಕೃತವಾಗಿ ನಿವೇಶನಗಳನ್ನು ಕೊಟ್ಟಿದೆ. ಅಲ್ಲಿ ಹೋಗಿ ಈ ರೀತಿ ಕೊಟ್ಟಿರತಕ್ಕ ನಿವೇಶನಗಳಲ್ಲಿ ಗುಂಡಿ ತೆಗೆದು ಗಿಡಗಳನ್ನು ನೆಡುವುದು ಅತ್ಯಂತ ಅಕ್ಷಮ್ಯ ಅಪರಾಧವಾಗುತ್ತದೆ. ಅದಕ್ಕಾಗಿ ತಮ್ಮ ಮೂಲಕ ಅರಣ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಅಲ್ಲಿ ಅಹಿತರಕವಾದಂಥ ಘಟನೆಗಳಾಗುವಂಥ ಅಗತ್ಯವಿಲ್ಲ. ಅವು ನಿಮ್ಮ ಕಾಲದಲ್ಲಿ ಕೊಟ್ಟಂಥ ನಿವೇಶನಗಳು. ಆದ್ದರಿಂದ ಅರಣ್ಯ ಇಲಾಖೆಯ ಅಧಿಕಾರಿಗಳು ಅಲ್ಲಿ ಪ್ರವೇಶ ಮಾಡದಂತೆ ತಕ್ಷಣ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ಒತ್ತಾಯವನ್ನು ಈ ಸಂದರ್ಭದಲ್ಲಿ ತಮ್ಮ ಮೂಲಕ ಮಾಡುತ್ತಿದ್ದೇನೆ. ಅಲ್ಲಿ ನಡೆಯುತ್ತಿರುವ ಸತ್ಯಾಗ್ರಹ, ಚಳುವಳಿಯನ್ನು ನಿಲ್ಲಿಸಲು ತಮ್ಮ ಅಧಿಕಾರಿಗಳ ಮೂಲಕ ಸೂಚನೆಯನ್ನೂ ಸಹ ಕಳಿಸಿಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್: ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಶೂನ್ಯ ವೇಳೆಯಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಮಾನ್ಯ ಅರಣ್ಯ ಸಚಿವರು ಮತ್ತು ಆಶ್ರಯ ಯೋಜನೆಗೆ

ಸಂಬಂಧಿಸಿದಂಥ ಸಚಿವರು ಉತ್ತರ ಕೊಡಬೇಕು. ತುರ್ತಾದಂಥ ಕಾರ್ಯವಿದ್ದರಿಂದ ಅವರು ವಿಧಾನ ಪರಿಷತ್‌ನಲ್ಲಿದ್ದಾರೆ. ಆದರೆ ನನ್ನ ಇಲಾಖೆಯ ಮೂಲಕವೆ ಆಶ್ರಯ ಯೋಜನೆಯ ಕೆಲಸ ಮಾಡಬೇಕಾಗಿರುವುದರಿಂದ ತಾವು ಸೂಚಿಸಿರುವಂತೆ, ಅಧಿಕೃತವಾಗಿ ನಿವೇಶನಗಳನ್ನು ಕೊಟ್ಟಿರುವ ಜಾಗದಲ್ಲಿ ಅರಣ್ಯ ಇಲಾಖೆಯವರು ಏನಾದರೂ ಅತಿಕ್ರಮ ಪ್ರವೇಶ ಮಾಡಿ ಗುಂಡಿಗಳನ್ನು ತೆಗೆಯುತ್ತಿದ್ದರೆ ಆ ಸಂದರ್ಭದಲ್ಲಿ ಕೂಡಲೆ ಅದನ್ನು ನಿಲ್ಲಿಸಿ ಅಲ್ಲಿನ ವಸ್ತುಸ್ಥಿತಿಯ ಪೂರ್ಣ ವರದಿಯನ್ನು ತರಿಸಬೇಕು ಎನ್ನತಕ್ಕ ಆಜ್ಞೆಯನ್ನು ಕಳಿಸಿಕೊಡತ್ತೇವೆ. ಅನಂತರ ಇದರ ಬಗ್ಗೆ ಸದನದ ಮುಂದೆ ಉತ್ತರವನ್ನು ಒದಗಿಸುತ್ತೇವೆ.

ಶ್ರೀ ಹೆಚ್.ಡಿ. ದೇವೇಗೌಡ: (ಮುಖ್ಯ ಮಂತ್ರಿಗಳು): 'ಆಶ್ರಯ' ಯೋಜನೆಯನ್ನು ಯಾರೇ ಜಾರಿಗೆ ತಂದಿರಲಿ, ಯಾವುದೇ ಸರ್ಕಾರ ಅನುಷ್ಠಾನಕ್ಕೆ ತಂದಿರಲಿ, ನಮ್ಮ ಸರ್ಕಾರ ಈ ಯೋಜನೆಯನ್ನು ಮುಂದುವರೆಸಿಕೊಂಡು ಹೋಗುತ್ತದೆ. ಆದರೆ ಒಂದು ವಿಷಯವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಏನೆಂದರೆ, ಯಾವುದೇ ಒಂದು ಕಾರ್ಯ ಮಾಡುವಾಗ ನಿಯಮಾವಳಿಗೆ ತದ್ವಿರುದ್ಧವಾಗಿ ಯಾರೂ ಮಾಡುವುದಕ್ಕೆ ಸಾಧ್ಯವಿಲ್ಲ. ಸರ್ಕಾರದ ಅನುಮತಿ ಇಲ್ಲದೆ ಆಶ್ರಯ ಯೋಜನೆಯಡಿ ಕೆರೆ ಅಂಗಳ ಪ್ರದೇಶವನ್ನು ಹಂಚಿದ್ದರೆ, ಕೆರ ಅಂಗಳ ಪ್ರದೇಶಗಳನ್ನು ಸರ್ಕಾರದ ಗ್ರಾಮೀಣಾಭಿವೃದ್ಧಿ ಇಲಾಖೆಗೆ ವಹಿಸಿಕೊಡದೆ ಅಲ್ಲಿ ಹೋಗಿ ಕಲ್ಲು ಹಾಕಿದ್ದೇವೆಂದು ಹೇಳಿ ಹಕ್ಕುಪತ್ರ ಕೊಡುವುದಾದರೆ ಆ ಜಮೀನನ್ನು ಅರಣ್ಯ ಇಲಾಖೆಗೆ, ಕಂದಾಯ ಇಲಾಖೆಗೆ ಅಥವಾ ಗ್ರಾಮೀಣಾಭಿವೃದ್ಧಿ ಇಲಾಖೆಗೆ ವಹಿಸಿಕೊಡದೆ ಕಾನೂನುಬಾಹಿರವಾಗಿ ಕೆಲಸ ಮಾಡಿರುವ ಬಗ್ಗೆ ದೂರುಗಳು ಬಂದಾಗ ಇಲ್ಲವೇ ಸರ್ಕಾರ ಆ ಕುರಿತು ಕೆಲವು ನಿಯಮಗಳನ್ನು ಕೈಬಿಟ್ಟು ಕೆಲಸ ಮಾಡಿದ್ದಲ್ಲಿ ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನಿಸಬೇಕಾಗುತ್ತದೆ. ಇದರ ಬಗ್ಗೆ ನನಗೆ ಸಾಕಷ್ಟು ದೂರುಗಳು ಬಂದಿವೆ. ಯಾರು ಆ ಜಮೀನಿನಲ್ಲಿ ವಾಸಿಸುತ್ತಿದ್ದಾರೋ ಅವರನ್ನು ಓಡಿಸಬೇಕೆಂದಾಗಲಿ, ಇದು ಹಿಂದಿನ ಸರ್ಕಾರ ಮಾಡಿರುವುದೆಂದು ಇವೊತ್ತು ಕೈಬಿಡಬೇಕೆಂದಾಗಲಿ ಆ ಉದ್ದೇಶ ಸರ್ಕಾರಕ್ಕಿಲ್ಲ. ಇದನ್ನು ನಾನು ಸೃಷ್ಟೀಕರಿಸಲಿಚ್ಛಿಸುತ್ತೇನೆ. ಆದರೆ, ಎಲ್ಲೆಲ್ಲಿ ನಿಯಮಕ್ಕೆ ತದ್ವಿರುದ್ಧವಾಗಿ ಕೆಲಸ ನಡೆದಿದೆಯೋ, ಎಲ್ಲಾ ಕಡೆ ಅಲ್ಲ, ಕೆಲವು ಕಡೆ ಘಟನೆಗಳು ನಡೆದಿವೆಯೋ ಅಂತಹ ಸನ್ನಿವೇಶದಲ್ಲಿ ಸರ್ಕಾರ ಕೆಲವು ಕಾರ್ಯಕ್ರಮಗಳನ್ನು ತೆಗೆದಕೊಳ್ಳಬೇಕಾಗುತ್ತದೆ ಮತ್ತು ತಾವು ಮಾತನಾಡುತ್ತಾ ಪಟ್ಟಿಯಲ್ಲಿರುವ ಎರಡು ಗ್ರಾಮಗಳ ಹೆಸರನ್ನು ಪ್ರಸ್ತಾಪಿಸಿದ್ದೀರಿ. ಇವೊತ್ತೇ ನಾವು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಟ್ಟು ವರದಿ ತರಿಸುವ ಪ್ರಯತ್ನ ಮಾಡುತ್ತೇವೆ. ಈ ಸದನ ನಾಳೆ ಮತ್ತು ನಾಡಿದ್ದು ನಡೆಯುತ್ತದೆ. ಆ ಸ್ಥಳದಲ್ಲಿ ನಡೆದಿರತಕ್ಕಂಥ ಘಟನೆಗಳ ಬಗ್ಗೆ ಪೂರ್ಣ ಮಾಹಿತಿಯನ್ನು ತರಿಸಿ ಸದನದಲ್ಲಿಯೇ ತಮ್ಮ ಮುಂದಿಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ನಾನು ಹೇಳುವುದೇನೆಂದರೆ ಈ ಆಶ್ರಯ ಯೋಜನೆಯಡಿಯಲ್ಲಿ ಕೆರೆ–ಕಟ್ಟೆಗಳನ್ನು ಬೆಲೆ ಬಾಳುವ ಜಮೀನುಗಳನ್ನು ವಶಪಡಿಸಿಕೊಂಡು ದುರುಪಯೋಗ ಪಡಿಸಿಕೊಂಡಿರುವಂಥ ಅನೇಕ ಪ್ರಯತ್ನಗಳಾಗಿವೆ. ಇದರ ಬಗ್ಗೆ ಸರ್ಕಾರ ಪರಿಶೀಲನೆ ಮಾಡಿ ಸೂಕ್ತ ಕ್ರಮ ಕೈಗೊಳ್ಳಬೇಕು. ಈ ಯೋಜನೆ ಮೂಲಕ ಕೋಟ್ಯಾಂತರ ರೂಪಾಯಿಗಳನ್ನು ಲೂಟಿ ಮಾಡಿರುವವರ ಮೇಲೆ ಕ್ರಮ ತೆಗೆದುಕೊಳ್ಳುವುದು ಸರಿಯಾಗಿದೆ. ಆದರೆ ಸದರಿ ಯೋಜನೆಯಡಿ ಇಲ್ಲವೇ ಬೇರೆ ಯೋಜನೆಗಳಡಿ ಬಡವರಿಗೆ ನಿವೇಶನಗಳನ್ನು ಕೊಟ್ಟಾಗ ಅಲ್ಲಿ ನಿವಾಸಿಗಳಿಗೆ ಕಿರುಕುಳ ಕೊಡುವಂಥ ಅಧಿಕಾರಿಗಳ ಪ್ರವೃತ್ತಿ ಏನಿದೆ, ಇದು ಕೊನೆಗಾಣ ಬೇಕಾಗಿದೆ. ಅದಕ್ಕೋಸ್ಕರ ಈ ವಿಷಯವನ್ನು ನಾನು ಪ್ರಸ್ತಾಪಿಸುತ್ತಿದ್ದೇನೆ.

ಶ್ರೀ ಹೆಚ್.ಡಿ. ದೇವೇಗೌಡ: ಈ ವಿಷಯವಾಗಿ ಇನ್ನೆರಡು ದಿವಸಗಳಲ್ಲಿ ಸದನದಲ್ಲಿ ಪೂರ್ಣ ಮಾಹಿತಿಯನ್ನು ಮಂಡಿಸುವುದಕ್ಕೆ ನಾವು ಸಿದ್ಧರಿದ್ದೇವೆ.

ನಿಲುವಳಿ ಸೂಚನೆಗೆ ಅನುಮತಿ ಕೋರಿಕೆ

ವಿಷಯ: ರಾಜ್ಯದಲ್ಲಿ ಜನತಾದಳ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಅನೇಕ ಕಡೆ ನಡೆದ ಗಲಭೆಗಳ ಬಗ್ಗೆ

† ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: (ಗುರುಮಿಠ್‌ಕಲ್): ಮಾನ್ಯ ಅಧ್ಯಕ್ಷರೆ, ಈಗಾಗಲೇ ಈ ವಿಷಯವನ್ನು ಪ್ರಸ್ತಾಪ ಮಾಡುವ ಆರಂಭದಲ್ಲಿ ಆ ಕಡೆಯ ಸದಸ್ಯರುಗಳು ಸಾಕಷ್ಟು ಗಲಾಟೆ ಮಾಡುತ್ತಿದ್ದರು. ಯಾವ ದುರುದ್ದೇಶದಿಂದ ಇದನ್ನು ಮಾಡಿಸಿದ್ದುದು, ಇದಕ್ಕೆ ನೀವೇ ನೇರವಾಗಿ ಜವಾಬ್ದಾರರು ಅಥವಾ ಈ ಮಂತ್ರಿಗಳು ಹೋಗಿ ಮಾಡಿಸಿದ್ದಾರೆ ಎಂದಲ್ಲ. ಈ ಗಲಾಟೆಗಳು ಗೋಕಾಕ್‌ನಲ್ಲಾಗಿರಬಹುದು. ಕೋಲಾರದಲ್ಲಾಗಿರಬಹುದು. ಮಧುಗಿರಿಯಲ್ಲಾಗಿರಬಹುದು. ದಕ್ಷಿಣ ಕನ್ನಡದಲ್ಲಾಗಿರಬಹುದು. ಗಂಡಸಿಯಲ್ಲಾಗಿಬಹುದು. ಅನೇಕ ಕಡೆಯಾಗಿದೆ. ಇದಕ್ಕೆ ಕಾರಣವೇನು ? ಡಿಸೆಂಬರ್ 12ನೇ ತಾರೀಖು ತಾವು ಅಧಿಕಾರ ವಹಿಸಿಕೊಂಡ ನಂತರ ಅನೇಕ ಕಡೆ ವಿಶೇಷವಾಗಿ ಬಡವರು ವಾಸಿಸುವ ಪ್ರದೇಶಗಳಲ್ಲಿ ಅವರ ಮನೆಗಳ ಮೇಲೆ ದಾಳಿ ಮಾಡಿ ಹಲ್ಲೆ ನಡೆಸಿದ್ದು, ಕೆಲವು ಕಡೆ ಕೊಲೆಯಾಗಿದೆ. ಕೆಲವು ಕಡೆ ಮನೆಗಳಲ್ಲಿ ಲೂಟಿ ಸಹ ಮಾಡಿದ್ದಾರೆ. ಗಲಭೆಕೋರರು ಎಲ್ಲಿಯವರೆಗೆ ಹೋಗಿದ್ದಾರೆಂದರೆ ಅವರಿಗೆ ಒಂದು ರೀತಿಯ ಕುಮ್ಮಕ್ಕು ಇದೆಯೆಂದು ಹೇಳಬೇಕೋ ಅಥವಾ ಯಾವುದೇ ಒಂದು ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಸರ್ಕಾರದ ಬೆಂಬಲ ನಮಗೆ ಇದೆಯೆಂದು ಹೇಳಿಕೊಂಡು ಮಾಡಿದ್ದಾರೆಂದು ಹೇಳಬೇಕೋ ಗೊತ್ತಾಗುತ್ತಿಲ್ಲ. ಈ ಬಗ್ಗೆ ಕೆಲವು ಉದಾಹರಣೆಗಳನ್ನು ಕೊಡುತ್ತೇನೆ. ಬಹುಶಃ ಮಾನ್ಯ ಮುಖ್ಯಮಂತ್ರಿಗಳಿಗೆ ಗೊತ್ತಿರುವಂತೆ, ಅವರ ಮತಕ್ಷೇತ್ರದಲ್ಲಿಯೂ ಕೂಡ ಕೆಲವು ಕಡೆ ಗಲಭೆಗಳು ನಡೆದಿವೆ. Crime No.331/94 – one Sri Channasiddaiah, Ex–Chairman along with six other followers went near the residence of M. Narayana, uttered provocative words, attacked the house, destroyed the tiles and looted in Ramanagaram.

ಇನ್ನೊಂದು ಕ್ರೈಮ್ ಸಂಖ್ಯೆ 334:94 ಮತ್ತೊಂದು 332:94. ಇವೆಲ್ಲಾ ಘಟನೆಗಳು ಚುನಾವಣೆ ಹಾಗೂ ಮುಖ್ಯಮಂತ್ರಿಗಳ ಆಯ್ಕೆ ಪ್ರಕ್ರಿಯೆಯಾದ ನಂತರ ಅದೇ ಮತ ಕ್ಷೇತ್ರದಲ್ಲಿ ನಡೆದಿರುವಂಥಾದ್ದು. ಮತ್ತು ಈ ಸಂಬಂಧವಾಗಿ ತೆಗೆದಿರುವ ಕೆಲರು ಫೋಟೋಗಳಿದ್ದು ಅದನ್ನು ಮಾನ್ಯ ಅಧ್ಯಕ್ಷರೇ ತಮಗೆ ಕಳುಹಿಸಿಕೊಡುತ್ತೇನೆ.

ಯಾವ ರೀತಿಯಾಗಿ ಆ ಮನೆಗಳ ಲೂಟಿ ಮಾಡಿದ್ದಾರೆ, ಯಾವ ರೀತಿಯಾಗಿ ಅವರು ಅಲಮಾರುಗಳನ್ನು ಅಲ್ಲಿರತಕ್ಕ ಬಂಗಾರ, ಬೆಳ್ಳಿಯನ್ನು ಲೂಟಿ ಮಾಡಿಕೊಂಡು ಹೋಗಿದ್ದಾರೆ ಮತ್ತು ಯಾವ ರೀತಿಯಾಗಿ ಹೆಣ್ಣು ಮಕ್ಕಳಿಗೂ ಕೂಡ ಹೊಡೆದಿದ್ದಾರೆ ಎನ್ನತಕ್ಕದ್ದು ಇದರಲ್ಲಿ ಸ್ಪಷ್ಟವಾಗಿದೆ. ಆದರೆ ಇಷ್ಟೆಲ್ಲಾ ಆದರೂ ಕೂಡ, ಕೇಸ್ ರಿಜಿಸ್ಟರ್ ಆದರೂ ಕೂಡ ಒಬ್ಬರನ್ನೂ ಸಹ ಇದುವರೆಗೆ ಅರೆಸ್ಟ್ ಮಾಡಿಲ್ಲ. ಕಾರಣ ಏನು ? ನಾನು ಕೇಳುತ್ತೇನೆ. ಏಕೆಂದರೆ ನ್ಯಾಯ ಎಲ್ಲರಿಗೂ ಸಿಗಬೇಕು. ನಾನು ಪ್ರಭಾವಶಾಲಿ ಇದ್ದೇನೆ ಅಥವಾ ನಾನು ಮಂತ್ರಿಯಾಗಿದ್ದಾಗ ನನ್ನ ಕ್ಷೇತ್ರದಲ್ಲಿ ನಡೆದಾಗ ತಾವು ಹೇಳಬಹುದು. ಇದು ಅನ್ಯಾಯ ಎಂದು ಅದೇ ರೀತಿಯಾಗಿ ತಾವು ಇವತ್ತಿನ ದಿವಸ ಮುಖ್ಯಮಂತ್ರಿಯಾದಾಗ ನಿಮ್ಮ ಮತ ಕ್ಷೇತ್ರದಲ್ಲಿ ಇದು ನಡೆದಾಗ, ಅವರು ಯಾರೇ ಇರಬಹುದು; ತಕ್ಷಣ ಅರೆಸ್ಟ್ ಮಾಡಿ, ಕಾನೂನು ಪ್ರಕಾರ ಕ್ರಮವನ್ನು ತೆಗೆದುಕೊಂಡರೆ ಎಲ್ಲರಿಗೂ ಒಂದು ವಿಶ್ವಾಸ